MUNSIFF MAGISTRATE COURT IN SHAHAPUR TALUK

519 SRI BAPUGOWDA RAYAPPA (Shahapur).—

Will the Minister for Law and Parliamentary Affairs be pleased to state :—

(*a*) whether there is any proposal before the Government to start a Munsiff-Magistrate's Court in Shahapur Taluk of Gulbarga District ;

(*b*) if so, whether it will be started during this financial year

SRI D. K. NAIKAR. (Minister for Law and Parliamentary Affairs).—

(*a*) No.

(*b*) Does not arise in view of reply to (*a*).

ಶ್ರೀ ಬಾಪುಗೌಡ ರಾಯಪ್ಪ.—ಸ್ವಾಮಿ, ಶಹಾಪುರ ಮತ್ತು ಸುರಪುರ್‌ನಲ್ಲಿರತಕ್ಕಂಥ ಕೇಸುಗಳು ಏನು ಇವೆ ಅದು ಹೆಚ್ಚು ಪ್ರಮಾಣದಲ್ಲಿದೆ. ಆದುದರಿಂದ ಶಹಾಪುರ್‌ನಲ್ಲಿ ಮುನ್ಸಿಫ್ ಮ್ಯಾಜಿಸ್ಟ್ರೇಟ್ ನ್ಯಾಯಾಲಯವೊಂದನ್ನು ಪ್ರಾರಂಭಿಸಬೇಕೆಂದು ಅಲ್ಲಿನ ನಾಗರೀಕರು ಮನವಿ ಕೊಟ್ಟಿರುವುದಂ ಸರ್ಕಾರದ ಗಮನಕ್ಕೆ ಬಂದಿಲ್ಲವೆ?

† ಶ್ರೀ ಡಿ. ಕೆ. ನಾಯಕರ್.—ಶಹಾಪುರ್ ನಾಗರೀಕರಿಂದ ೧೯೬೨ನೇ ಇಸವಿಯಲ್ಲಿ ಒಂದಂ ಸಲ ಬಂದಿತ್ತು. ಈ ಬಗ್ಗೆ ಸರ್ಕಾರದವರು ಹೈಕೋರ್ಟ್‌ನವರಿಂದ ಸಮಾಲೋಚನೆ ಮಾತಿದಾಗ ಶಹಾಪುರ್‌ಗೆ ಪ್ರತ್ಯೇಕವಾದ ಕೋರ್ಟ್‌ಮಾಡುಪ ಅವಶ್ಯಕತೆ ಇಲ್ಲ, ಅಷ್ಟೊಂದು ಕಟ್ಟಳೆಗಳು ಇಲ್ಲ ಎಂದು ಸರ್ಕಾರಕೆ ತಿಳಿಸಿದ ಮೇಲೆ ಆ ನಿರ್ಣಯವನ್ನು ತೆಗೆದುಕೊಳ್ಳಲಿಲ್ಲ.

ಶ್ರೀ ಬಾಪುಗೌಡ ರಾಯಪ್ಪ.—ಶಹಾಪೂರ್ ಮತ್ತು ಸುರಪೂರ್ ತಾಲ್ಲೂಕುಗಳಲ್ಲಿ ೫ ವರ್ಷ ದಿಂದಲೂ ಏನು ಕಟ್ಟಳೆಗಳು ನಡೆಯುತ್ತಾ ಇದೆ ಅದನ್ನು ಸಭೆಯ ಮುಂದೆ ಇಡುತ್ತೀರಾ?

ಶ್ರೀ ಡಿ. ಕೆ. ನಾಯಕರ್.—ಈ ಬಗ್ಗೆ ನಿಮ್ಮ ನೋಟೀಸ್ ಇದ್ದಲ್ಲಿತರಿಸುತ್ತೇನೆ.

SRI RAJAPID NAIK. May I know what are the requisites for establishing a Munsif Court?

ಶ್ರೀ ಡಿ. ಕೆ. ನಾಯಕರ್—ಒಂದು ಮುನ್ಸಿಫ್ ಮ್ಯಾಜಿಸ್ಟ್ರೇಟ್ ಕೋರ್ಟ್ ಪ್ರಾರಂಭಿಸಬೇಕಾದರೆ ವರ್ಷಕ್ಕೊಂದಕ್ಕೆ ಸುಮಾರು ೩೦೦ ಕೇಸುಗಳು ಬರಬೇಕು. ಆದರಲ್ಲಿ ೧೫೦ ಸೂಟ್ಸ್ ಮತ್ತು ೧೦೦ಐ ಪಿ..ಸಿ ಕೇಸುಗಳು ಇರಬೇಕು. If they have got so many cases the Munsiff Magistrate has got sufficient work. ಇದು ಕಾನೂನಿನಲ್ಲೇ ಇದೆ. ಆ ತಾಲ್ಲೂಕಿನಲ್ಲಿ ಅಷ್ಟು ವರ್ಕ್ ಇಲ್ಲದೇ ಇದ್ದರೆ ಕೋರ್ಟು ಕೊಡುವುದಕ್ಕಾಗುವುದಿಲ್ಲ.

ಶ್ರೀ ಬಾಪುಗೌಡ ರಾಯಪ್ಪ.—ನೀವು ಹೇಳಿದ ಪ್ರಕಾರ ಶಹಾಪುರ್ ತಾಲ್ಲೂನಲ್ಲಿ ಹೆಚ್ಚು ಕಟ್ಟಳೆಗಳು ನಡೆಯುತ್ತಾ ಇವೆ. ೪ ವರ್ಷದಿಂದಲೂ ಎಷ್ಟು ನಡೆಯುತ್ತಾ ಇದೆ ಎನ್ನುವ ಲೆಕ್ಕವನ್ನು ತರಿಸಿ ಈ ಮನೆಯಲ್ಲಿ ಇಡುತ್ತೀರಾ?

ಶ್ರೀ ಡಿ. ಕೆ. ನಾಯಂಕರ್.—೧೯೬೨ರಲ್ಲಿ ಶಹಾಪುರ್ ನಾಗರೀಕರು ರೆಪ್ರೆಸೆಂಟೇಷನ್ ಕಳುಹಿಸಿದಾಗ ಈ ವಿಚಾರದಲ್ಲಿ ಹೈಕೋರ್ಟ್‌ನವರೊಂದಿಗೆ ಸಮಾಲೋಚನೆ ನಡಸಿದಾಗ ಅವರಂ ಹೇಳಿದರಂ. ಅಲ್ಲಿ ಸಾಕಷ್ಟು ಕಟ್ಟಳೆಗಳು ಇಲ್ಲ, ಆದುದರಿಂದ ಅಲ್ಲಿ ಕೋರ್ಟಿನ ಅವಶ್ಯಕತೆ ಇಲ್ಲ. ಈ ವಿಚಾರವನ್ನು ಆಗಲೇ ತಿಳಿಸಿದ್ದಾರೆ. ಆದರೂ ಕೂಡ ನೀವು ಕೇಳದೇ ಇದ್ದರೂ ನಾನೇ ಮತ್ತೆ ಕೇಳಿದ್ದೇನೆ. ಅಲ್ಲಿ ಕ್ರಿಮಿನಲ್ ಮತ್ತು ಸಿವಿಲ್ ಕೇಸಸ್-ಎಷ್ಟು ಬರುತ್ತದೆ ಎಂದು, ಆ ಇನ್‌ಫರ್ಮೇಷನ್ ಇನ್ನೂ ಬಂದಿಲ್ಲ.